

**ಅಜಯ್ ವರ್ಮಾ ಅಲ್ಲೂರಿ**

ಕಲೆ: ರೂಪಶ್ರೀ ಕಲ್ಲಿಗನೂರು

# ವಿದಾಯ

ಬರುವ ಮುನ್ನವೇ ನೀನು ಇಲ್ಲಿಗೆ
ಹೊರಟು ಬಿಡುವೆನು ನಾನು
ನೀನು ಅರಿಯದ ಊರಿಗೆ

ಕಾಣುವುದಿಲ್ಲ
ಮತ್ತೆಂದೂ ನಿನಗೆ
ಕೇಳುವುದಿಲ್ಲ
ನಿನ್ನ ಒಳಗಿವಿಗೆ
ತಟ್ಟುವುದಿಲ್ಲ
ನಾ ತೊರೆದು ಹೋದ ಹಾಡು ನಿನ್ನ ಎದೆಗೆ
ಮುಟ್ಟುವುದಿಲ್ಲ
ಈ ಗಾಳಿ ನನ್ನಿಂದ ಹೊತ್ತೊಯ್ದು ಮಿದುಗಂಧ
ನಿನ್ನ ಮೂಗ ತುದಿಗೆ

ನನಗಿದ್ದ ಹೆಸರುಗಳನ್ನೆಲ್ಲ
ನೀನು
ಒಂದೊಂದೇ ಕರೆಯುತ್ತ ಕೂಗುತ್ತ
ಅವರಿವರ ಕೇಳುತ್ತ
ನಾ ಹೋಗಿರಬಹುದಾದ
ತಾವುಗಳ ನೆನೆದುಕೊಂಡು
‘ಇಲ್ಲ ಇಲ್ಲ, ಅಲ್ಲಿಗೆ ಹೋಗಿರಲಾರ’ನೆಂದು
ಒಳಗೊಳಗೇ ಲೆಕ್ಕಹಾಕುತ್ತಾ
ಉಳಿದು ಬಿಡುವೆ
ನಾ ಹೆಜ್ಜೆ ಕಿತ್ತು ಹಾರಿ ಹೋದ ಜಾಗದಲ್ಲೇ.

